ಸಾಕ್ಷಿಗೆ ದಿನಾಂಕ 31-01-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

ಮುಂದುವರೆದ ಪಾಟೀ ಸವಾಲು. ಆರೋಪಿತರ ಪರ ಶ್ರೀ ಹೆಚ್ ಎಸ್ ಎನ್ ವಕೀಲರಿಂದಃ-

ದೂರು ಕೊಡಲು ನಾನು, ನನ್ನ ತಂದೆ ಮತ್ತು ತಾಯಿ ಸೇರಿ ಹೋಗಿರುತ್ತೇವೆ. ದೂರು ಬರೆಯಲು ಮಾಹಿತಿಯನ್ನು ನಾನೇ ನೀಡಿದ್ದೇನೆ. ದೂರು ಬರೆಯಲು ನಾನು ಪೋಲೀಸ್ ಠಾಣೆಯಲ್ಲಿ ಮಾಹಿತಿ ನೀಡಿದ್ದೇನೆ. ನನ್ನ ತಂದೆ ತಾಯಿ ಪೋಲೀಸ್ ಠಾಣೆಯಲ್ಲಿ ಏನೂ ಹೇಳಿಕೆ ಕೊಟ್ಟಿಲ್ಲ. 1ನೇ ಆರೋಪಿತನು 2ನೇ ಮದುವೆಯಾಗಿದ್ದಾನಂತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1ನೇ ಆರೋಪಿತನು ನನಗೆ ಅಬಾಶನ್ ಮಾಡಿಸಿರುತ್ತಾನಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತನು ನನಗೆ ನೀವು ಕಪ್ಪಾಗಿದ್ದೀರಾ ನಿನಗೆ ಹುಟ್ಟುವ ಮಕ್ಕಳು ಕಪ್ಪಾಗಿರುತ್ತವಂತಾ ನನಗೆ ಅಬಾಶನ್ ಮಾಡಿಸಿರುತ್ತಾರಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ವಕೀಲರ ಮೂಲಕ ನೀಡಿದ ದೂರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಯವುದೇ ಘಟನೆ ನಡೆಯದೇ ಇದ್ದರೂ ಸಹಾ ನಾನು ಸುಳ್ಳು ಮಾಹಿತಿಯನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ.

ಈಗ 7 ವರ್ಷದಿಂದ ನಾನು ನನ್ನ ತವರುಮನೆಯಲ್ಲಿ ವಾಸವಾಗಿದ್ದೇನೆ. ಪೋಲೀಸರು ಆ ದಿನ ಪಂಚನಾಮೆ ಮಾಡಿದ್ರು ಮತ್ತು ಪೋಟೋ ತೆಗೆದ್ರೂ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಆರೋಗ್ಯ ಸರಿಯಿಲ್ಲದ್ದರಿಂದ ನಾನು ತವರುಮನೆಯಲ್ಲಿದ್ದೇನೆಂದರೆ ಸರಿಯಲ್ಲ. ಆರೋಗ್ಯ ಸರಿ ಹೋದ ನಂತರ ನೀವು ಗಂಡನ ಮನೆಗೆ ಬರುತ್ತೇನಂತಾ ಹೇಳಿ ಗಂಡನ ಮನೆಗೆ ಬಂದಿರುವುದಿಲ್ಲವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ನನಗೆ ಮಾನಸಿಕ ತೊಂದರೆ ನೀಡಿದ್ದಾರೆನ್ನುತ್ತಾರೆ. ನನ್ನ ಗಂಡ ನನಗೆ ಅನೇಕ ಸಾರಿ ಮನೆಗೆ ಬಂದು ಕರೆದಿರುತ್ತಾರೆಂದರೆ ಸರಿಯಲ್ಲ. ಅವರು ಕರೆದ್ರೂ ಸಹಾ ನೀವು ಬಂದಿರುವುದಿಲ್ಲವೆಂದರೆ ಸಾಕ್ಷಿಯು ಅವರು ನನಗೆ ಕರೆದಿರುವುದಿಲ್ಲವೆನ್ನುತ್ತಾರೆ. ಇವತ್ತಿಗೂ ಸಹಾ ನಿಮಗೆ ಕರೆದುಕೊಂಡು ಹೋಗಲು ತಯಾರಿದ್ದಾರೆಂದರೆ ಸಾಕ್ಷಿಯು ಅವರು ಎರಡನೇ ಮದುವೆ ಮಾಡಿಕೊಂಡಿದ್ದಾರೆನ್ನುತ್ತಾರೆ. ನನ್ನ ಗಂಡ 2ನೇ ಮದುವೆಯಾಗಿದ್ಮಾತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ತಂದೆ ತಾಯಿಯ ಮಾತನ್ನು ಕೇಳಿ ನನ್ನ ತಂದೆ ತಾಯಿ ಮನೆಯಲ್ಲಿದ್ದು ನನಗೆ ನನ್ನ ಗಂಡ ನನಗೆ ತೊಂದರೆ ಕೊಡುತ್ತಿದ್ದಾನಂತಾ ಸುಳ್ಳು ಮಾಹಿತಿಯನ್ನು ನಮ್ಮ ವಕೀಲರಿಗೆ ನೀಡಿ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನಗೆ ಪ್ರಾಣಬೆದರಿಕೆ ಹಾಕಿದರು ಮತ್ತು ವರದಕ್ಷಿಣೆ ಕಿರುಕುಳ ನೀಡುತ್ತಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ